## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ತುಮಕೂರು ಜಿಲ್ಲೆ, ತುರುವೇಕೆರೆ ತಾಲ್ಲೂಕಿನ ಮಾಯಸಂದ್ರ ಮತ್ತು ಇತರೆ 11 ಗ್ರಾಮಗಳ ಕುಡಿಯುವ ನೀರು ಸರಬರಾಜು ಯೋಜನೆ ಕಾಮಗಾರಿಯನ್ನು 3ನೇಯ ವ್ಯಕ್ತಿ / ಸಂಸ್ಥೆ ತಪಾಸಣೆ ಮಾಡಲು ತಂಡ ರಚಿಸುವ ಕುರಿತು.

ಓದಲಾಗಿದೆ: ಮುಖ್ಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ರವರ ಕಡತ ಸಂ:ಗ್ರಾಅಪ 951 ಗ್ರಾಕುನೀ&ನೈಇ 2017-18.

---

**ಪೀಠಿಕೆ:**

ತುಮಕೂರು ಜಿಲ್ಲೆ, ತುರುವೇಕೆರೆ ತಾಲ್ಲೂಕಿನ ಮಾಯಸಂದ್ರ ಮತ್ತು ಇತರೆ 11 ಗ್ರಾಮಗಳ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವ ಯೋಜನೆ ಕಾಮಗಾರಿಯ ಟೆಂಡರ್ ಐಟಂಗಳ ಪರಿಮಾಣಗಳಿಗಿಂತ ಹೆಚ್ಚುವರಿಯಾಗಿ ಅನುಷ್ಠಾನಗೊಳಿಸಲಾಗಿರುವುದು ಹಾಗೂ ಟೆಂಡರ್‌ನಲ್ಲಿ ಇಲ್ಲದಿರುವ ಹೊಸ ಐಟಂಗಳನ್ನು ಹೆಚ್ಚುವರಿಯಾಗಿ (Variation due to tendered items & due to new items) ತೆಗೆದುಕೊಂಡಿರುವುದರಿಂದ ಮುಖ್ಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆರವರು ಕಾಮಗಾರಿ ಅನುಷ್ಠಾನ ಕುರಿತು ತಪಾಸಣೆಗೊಳಪಡಿಸಲು ಪ್ರಸ್ತಾವನೆ ಸಲ್ಲಿಸಿದ್ದಾರೆ. ಈ ಕಾರಣಗಳಿಂದ ಉದ್ದೇಶಿತ ಯೋಜನೆ ಕಾಮಗಾರಿಯನ್ನು 3ನೇಯ ವ್ಯಕ್ತಿ / ಸಂಸ್ಥೆಯಿಂದ ತಪಾಸಣೆ ಮಾಡಿಸಲು ತಂಡ ರಚಿಸಲು ತೀರ್ಮಾನ ಕೈಗೊಳ್ಳಲಾಗಿದೆ. ಆದ್ದರಿಂದ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 110 ಗ್ರಾನೀಸ(5) 2017 ಬೆಂಗಳೂರು, ದಿನಾಂಕ:18.12.2017.**

ಪೀಠಿಕೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ, ತುಮಕೂರು ಜಿಲ್ಲೆ, ತುರುವೇಕೆರೆ ತಾಲ್ಲೂಕಿನ ಮಾಯಸಂದ್ರ ಮತ್ತು ಇತರೆ 11 ಗ್ರಾಮಗಳ ಕುಡಿಯುವ ನೀರಿನ ಯೋಜನಾ ಕಾಮಗಾರಿಯ Tender ಐಟಂಗಳ ವ್ಯತ್ಯಾಸ ಹಾಗೂ ಹೊಸ ಐಟಂಗಳ ಹೆಚ್ಚುವರಿ(Variation) ಕುರಿತು ಪರಿಶೀಲಿಸಲು / ತಪಾಸಣೆ ನಡೆಸಲು ಈ ಕೆಳಕಂಡಂತೆ 3ನೇಯ ವ್ಯಕ್ತಿ / ಸಂಸ್ಥೆಯನ್ನು ರಚಿಸಲು ಆದೇಶ ಹೊರಡಿಸಲಾಗಿದೆ.

| | | |
|---|---|---|
| 1 | ಪ್ರೊ. ಎಂ.ಎಸ್. ಮೋಹನ್ ಕುಮಾರ್, Department of Civil Engineering, ಭಾರತೀಯ ವಿಜ್ಞಾನ ಸಂಸ್ಥೆ, ಮಲ್ಲೇಶ್ವರಂ, ಬೆಂಗಳೂರು-560012.<br>ಇಮೇಲ್-msmk@civil.iisc.ernet.in | ಅಧ್ಯಕ್ಷರು |
| 2 | ಶ್ರೀ ವಿ.ಜೆ. ರಾಯ್ಕರ್, ನಿವೃತ್ತ ಕಾರ್ಯಪಾಲಕ ಅಭಿಯಂತರರು, ಬೆಳಗಾವಿ. | ಸದಸ್ಯರು |
| 3 | ಶ್ರೀ ರಂಗಸ್ವಾಮಿ, ನಿವೃತ್ತ ಕಾರ್ಯಪಾಲಕ ಅಭಿಯಂತರರು, ಮೈಸೂರು. | ಸದಸ್ಯರು |

2. ಸದರಿ ತಪಾಸಣಾ ಕಾರ್ಯಕ್ಕಾಗಿ ಸಮಿತಿಯ ಸದಸ್ಯರುಗಳಿಗೆ ಭತ್ಯೆಗಳನ್ನು ಈ ಕೆಳಗಿನಂತೆ ನೀಡತಕ್ಕದ್ದು.

ಅ) ಪ್ರತಿ ತಪಾಸಣೆ / ಸಭೆಯಲ್ಲಿ ಭಾಗವಹಿಸುವವರಿಗೆ – ರೂ.5000.00/-
ಆ) ದಿನಭತ್ಯೆ ಮತ್ತು ಸಂಭವನೀಯ ಭತ್ಯೆ – ಪ್ರವಾಸ ಭತ್ಯೆಗಾಗಿ ಅನುಸರಿಸಲ್ಪಡುವ ನಿಯಮಗಳನ್ವಯ ಪಾವತಿಸುವುದು
ಇ) ತಪಾಸಣೆ ವರದಿ ತಯಾರಿಕೆಗೆ – ರೂ.500.00/-
ಈ) ಪ್ರಯಾಣ ಭತ್ಯೆ – ಪ್ರವಾಸ ಭತ್ಯೆಗಾಗಿ ಅನುಸರಿಸಲ್ಪಡುವ ನಿಯಮಗಳನ್ವಯ ಪಾವತಿಸುವುದು

3. ಮೇಲ್ಕಂಡ ತಂಡಕ್ಕೆ ಉದ್ದೇಶಿತ ಯೋಜನೆಯ ತಪಾಸಣೆಗೊಳಪಡಿಸಿರುವ ಎಲ್ಲಾ ಕಾಮಗಾರಿಗಳನ್ನು ಭೌತಿಕವಾಗಿ Variation ಬಗ್ಗೆ ಪರಿಶೀಲಿಸಿ, ನಂತರ ಕೈಗೊಂಡ ತಪಾಸಣೆಯ ವಿಸ್ತೃತ ವರದಿಯನ್ನು ದಾಖಲೆಗಳೊಂದಿಗೆ 30 ದಿನಗೊಳಗಾಗಿ ಸರ್ಕಾರಕ್ಕೆ ನೀಡಿತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕೆ. ಕರಿಯಪ್ಪ)
ಸರ್ಕಾರದ ಉಪ ಕಾರ್ಯದರ್ಶಿ(ಗ್ರಾನೀಸ)
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

**ಪ್ರತಿಗಳು:**

1. ಮಹಾಲೇಖಪಾಲರು (ಲೆಕ್ಕಪತ್ರ) ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲರು (ಎಯು-1) ಕರ್ನಾಟಕ, ಬೆಂಗಳೂರು.
3. ಮಹಾಲೇಖಪಾಲರು (ಎಯು-2) ಕರ್ನಾಟಕ, ಬೆಂಗಳೂರು.
4. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರುರವರ ಆಪ್ತಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು-1.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಪ್ರಧಾನ ಕಾರ್ಯದರ್ಶಿಗಳು, ಯೋಜನಾ ಇಲಾಖೆ, ಬೆಂಗಳೂರು.
6. ವಿಶೇಷಾಧಿಕಾರಿಗಳು (ಜಿಪಂ) ಹಾಗೂ ಸರ್ಕಾರದ ಪದನಿಮಿತ್ತ ಉಪಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ ಬೆಂಗಳೂರು.
7. ಸರ್ಕಾರದ ಆಧೀನ ಕಾರ್ಯದರ್ಶಿ, ವೆಚ್ಚ (6) (ಜಿಪಂ) ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
8. ಶ್ರೀ ಎಂ.ಎಸ್. ಮೋಹನ್ ಕುಮಾರ್, ಪ್ರೊಫೆಸರ್, Department of Civil Engineering, ಭಾರತೀಯ ವಿಜ್ಞಾನ ಸಂಸ್ಥೆ, ಮಲ್ಲೇಶ್ವರಂ, ಬೆಂಗಳೂರು-560012.
9. ಶ್ರೀ ವಿ.ಜೆ. ರಾಯ್ಕರ್, ನಿವೃತ್ತ ಕಾರ್ಯಪಾಲಕ ಅಭಿಯಂತರರು, ಪ್ಲಾಟ್ ನಂ.51, ನೀಲೆ ಕಟ್ಟಡ, ಅಮೃತ ವಿದ್ಯಾಲಯದ ಹತ್ತಿರ, ನಿತ್ಯಾನಂದ ಕಾಲೋನಿ, ಬೆಳಗಾವಿ.
10. ಶ್ರೀ ರಂಗಸ್ವಾಮಿ, ನಿವೃತ್ತ ಕಾರ್ಯಪಾಲಕ ಅಭಿಯಂತರರು, ಡೋರ್ ನಂ.1240, ಮೊದಲನೇ ಕ್ರಾಸ್, ಕೃಷ್ಣಮೂರ್ತಿಪುರಂ, ಮೈಸೂರು-570004.
11. ಅಧ್ಯಕ್ಷರು, ಜಿಲ್ಲಾ ಪಂಚಾಯತ್, **ತುಮಕೂರು.**
12. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, **ತುಮಕೂರು.**
13. ಮುಖ್ಯ ಲೆಕ್ಕಾಧಿಕಾರಿ, ಜಿಲ್ಲಾ ಪಂಚಾಯತ್, ತುಮಕೂರು.
14. ಅಧೀಕ್ಷಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವೃತ್ತ, **ಬೆಂಗಳೂರು.**
15. ಮುಖ್ಯ ಲೆಕ್ಕಾಧಿಕಾರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಕಾವೇರಿ ಭವನ, ಬೆಂಗಳೂರು.
16. ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, **ತುಮಕೂರು.**
17. ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಪ್ರಧಾನ ಕಾರ್ಯದರ್ಶಿ ಇವರ ಆಪ್ತ ಕಾರ್ಯದರ್ಶಿ.
18. ಆಯುಕ್ತರು, ಮತ್ತು ಪದನಿಮಿತ್ತ ಸರ್ಕಾರದ ಅಪರ ಕಾರ್ಯದರ್ಶಿ, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ / ಆಂತರಿಕ ಆರ್ಥಿಕ ಸಲಹೆಗಾರರು, RDPR ಇಲಾಖೆ ಇವರುಗಳ ಆಪ್ತ ಸಹಾಯಕರು.
19. ಮುಖ್ಯ ಸಂಪಾದಕರು ಮತ್ತು ಸಂಪರ್ಕಾಧಿಕಾರಿ ಕರ್ನಾಟಕ ವಿಕಾಸ ಗ್ರಾಅಪಂ.ರಾಜ್ ಇಲಾಖೆ, ಬೆಂಗಳೂರು.
20. ಶಾಖಾಧಿಕಾರಿ, ರವಾನೆ ಮತ್ತು ಸ್ವೀಕೃತಿ ಶಾಖೆ, ಗ್ರಾಅಪಂ.ರಾಜ್ ಇಲಾಖೆ (ವಾರದ ಗೆಜೆಟ್‌ನಲ್ಲಿ ಪ್ರಕಟಿಸಲು 5 ಪ್ರತಿಗಳು).
21. ರಾಜ್ಯ ಪತ್ರಾಗಾರ ಇಲಾಖೆ (ಬಿಡಿ ಪ್ರತಿ ಶಾಖೆ).
22. ನಿರ್ದೇಶಕರು, ಶ್ರೀ ಅಬ್ದುಲ್ ನಜೀರ್ ಸಾಬ್‌ರವರ ಗ್ರಾಮೀಣಾಭಿವೃದ್ಧಿ ರಾಜ್ಯ ಸಂಸ್ಥೆ, ಲಲಿತ್ ಮಹಲ್ ರಸ್ತೆ, ಮೈಸೂರು.
24. ಗ್ರಾಅಪಂ.ರಾಜ್ ಇಲಾಖೆಯ ಮಾಹಿತಿ ಕೇಂದ್ರ (10 ಪ್ರತಿಗಳು). 25. ಶಾಖಾ ರಕ್ಷಾ ಕಡತ: ಹೆಚ್ಚುವರಿ ಪ್ರತಿಗಳು.